ಡಾ॥ ಆರ್. ನಾಗನಗೌಡ.—ಇದಕ್ಕೆ ಸಂಬಂಧಿಸಿದಹಾಗೆ ಈಗ ತಮಗೆಲ್ಲಾ ಎರಡು ಪುಸ್ತಕಗಳನ್ನು ಹಂಚಿದೆ. ಅವುಗಳನ್ನು ನೋಡಿದರೆ ಗೊತ್ತಾಗುತ್ತದೆ.

ಶ್ರೀಮತಿ ಬಿ. ಎಲ್. ನುಬ್ಬಮ್ಮ.—ಏಲಕ್ಕಿ ಗಿಡಕ್ಕೆ ರೋಗ ತಗುಲಿದರೆ ಅದರ ಬಗ್ಗೆ ಪರಿಹಾರ ಮಾರ್ಗ ವೇನು ?

ಡಾ॥ ಆರ್. ನಾಗನಗೌಡ.—ಇದರ ಬಗ್ಗೆ ಇಲಾಖೆಯವರು ಈಗಾಗಲೇ ಯೋಚಿಸುತ್ತಿದ್ದಾರೆ.

ಶ್ರೀಮತಿ ಬಿ. ಎಲ್. ನುಬ್ಬಮ್ಮ.—ಈ ಏಲಕ್ಕಿ ಬೆಳೆ ದಿನೇ ದಿನೇ ನಷ್ಟವಾಗುತ್ತಿರುವುದರಿಂದ ಈ ಬಗ್ಗೆ ಪರಿಹಾರ ಮಾರ್ಗ ಕಂಡುಹಿಡಿಯಲು ಹೆಚ್ಚಿನ ಸಂಶೋಧನೆ ನಡೆಸುತ್ತೀರಾ ?

ಡಾ॥ ಆರ್. ನಾಗನಗೌಡ.—ಅಗತ್ಯವಾಗಿ.

ಶ್ರೀ ಟಿ. ಎಣ್. ಮೂಡಲಗಿರಿಗೌಡ.—1953ನೆಯ ಸಾಲಿನಲ್ಲಿ ಜೋಳದ ಬೆಳೆ ಎಷ್ಟು ನಷ್ಟವಾಯಿತು ?

ಡಾ॥ ಆರ್. ನಾಗನಗೌಡ.—ನೋಟೀಸ್.

ಶ್ರೀ ಟಿ. ಎಣ್. ಮೂಡಲಗಿರಿಗೌಡ.—ತುಮಕೂರು ಜಿಲ್ಲೆಯಲ್ಲಿ ಜೋಳದ ಫಸಲು ಸಂಪೂರ್ಣವಾಗಿ ನಷ್ಟವಾಗಿದೆಯೆಂದು ಹೇಳುತ್ತೇನೆ, ಒಪ್ಪುತ್ತೀರಾ ?

ಡಾ॥ ಆರ್. ನಾಗನಗೌಡ.—ಆ ಬಗ್ಗೆ ಇಲಾಖೆಯವರಿಂದ information ಇಲ್ಲ.

ಶ್ರೀ ಟಿ. ಎಣ್. ಮೂಡಲಗಿರಿಗೌಡ.—ಈ ಬಗ್ಗೆ ಇಲಾಖೆಯವರು ಯಾವ ಗಮನವನ್ನೂ ಕೊಟ್ಟಿಲ್ಲ, ಅಲ್ಲವೇ ?

ಡಾ॥ ಆರ್. ನಾಗನಗೌಡ.—ಅರೀತಿ ಖಚಿತವಾಗಿ ಹೇಳಲು ಸಾಧ್ಯವಿಲ್ಲ.

Mr. SPEAKER.—The next questions No. 998 and No. 1030 may be taken up together.

National Extension Schemes.

Q.—998. Sri C. H. LINGADEVARU (Chiknayakanahalli).—

Will the Government be pleased to state :—

(*a*) the names of taluks to which the National Extension Scheme is proposed to be extended during the coming year ;

(*b*) whether they would take steps to extend the said scheme to Chiknayakanahalli Taluk which is a backward taluk in all respects ?

A.—Dr. R. NAGANGOWDA (Minister for Agriculture).—

(*a*) Eight National Extension Service Scheme Blocks are proposed to be opened during the year 1954-55. The places where these Blocks are to be located have not been decided yet.

(*b*) This will be considered when the question of location of the Blocks is taken up.

Q.—1030. Sri T. N. MUDALAGIRI GOWDA (Kunigal).—

Will the Government be pleased to state :—

(*a*) the areas recommended by the State Government to the Government of India to be included in Community Projects and National Extension Service Schemes in the year 1954-55 as envisaged in the Five-Year Plan ;

(*b*) whether a resolution was not made in the Ryots' Conference held in 1953 in Tumkur Taluk urging that some hoblies of Tumkur Taluk and Kunigal Taluk should be included in the Community Project Scheme ?

A.—Dr. R. NAGANGOWDA (Minister for Agriculture).—

(*a*) Eight National Extension Service Blocks are proposed to be opened during the year 1954-55. Since the Government of India approval to this has not been received, no recommendation has been made to Government of India regarding the areas to be included under the National Extension Service Scheme.

(*b*) The Government is not aware of any such resolution.

ಶ್ರೀ ಸಿ. ಎಚ್. ಲಿಂಗದೇವರು.—ಈ ಯೋಜನೆಗೆ ಜಾಗಗಳನ್ನು ಗೊತ್ತು ಮಾಡುವುದು ಯಾವಾಗ ?

ಡಾ॥ ಆರ್. ನಾಗನಗೌಡ.—ಅದಕ್ಕಿನ್ನೂ ಕಾಲ ಇದೆ.

ಶ್ರೀ ಸಿ. ಎಚ್. ಲಿಂಗದೇವರು.—ಅದು ಎಷ್ಟು ದಿನದಲ್ಲಿ ಆಗಬಹುದು ?

ಡಾ॥ ಆರ್. ನಾಗನಗೌಡ.—ಈ ಬಿಸಿಲು ಕಾಲದಲ್ಲಿ ಆಗಬಹುದು.

ಶ್ರೀ ಸಿ. ಎಚ್. ಲಿಂಗದೇವರು.—ಜಾಗಗಳನ್ನು ಆರಿಸಿ ಗೊತ್ತುಮಾಡುವುದಕ್ಕೆ ಯಾವುದಾದರೂ ನೀತಿ, ನಿಯಮ ಉಂಟೇ ?

ಡಾ॥ ಆರ್. ನಾಗನಗೌಡ.—ಇದೆ.

ಶ್ರೀ ಸಿ. ಎಚ್. ಲಿಂಗದೇವರು.—ಅದು ಯಾವುದು ?

ಡಾ॥ ಆರ್. ನಾಗನಗೌಡ.—ಇದಕ್ಕೆ ಅನುಕೂಲವಾದ ವಾತಾವರಣ ಎಲ್ಲಿರುತ್ತದೋ ಅದನ್ನು ನೋಡಿಕೊಂಡು ಮಾಡುತ್ತೇವೆ. ಈ ವರ್ಷ ಏಳು, ಬರುವ ವರ್ಷ ಎಂಟು, ಅದರ ಮುಂದಿನ ವರ್ಷ ಹನ್ನೆರಡು ಈ ರೀತಿ ಪ್ರಾರಂಭಿಸಬೇಕೆಂದಿದೆ. ಅಂತೂ ಈ ನ್ಯಾಷನಲ್ ಎಕ್ಸ್‌ಟೆಂಷನ್ ಸ್ಕೀಮನ್ನು ಸಾಧ್ಯವಾದಮಟ್ಟಿಗೂ ಹೆಚ್ಚಿಸಿಕೊಂಡು ಹೋಗಿ ಒದಗುವ ಹಣಕ್ಕೆ ತಕ್ಕಹಾಗೆ ಮುಂದುವರಿಸಿಕೊಂಡು ಹೋಗಬೇಕೆಂದಿದ್ದೇವೆ.

ಶ್ರೀ ಸಿ. ಎಚ್. ಲಿಂಗದೇವರು.—ಮೊದಲು selection ಮಾಡಬೇಕಾದರೆ ಯಾವ ಆಧಾರದಮೇಲೆ ಮಾಡುತ್ತೀರಿ ?

Mr. SPEAKER.—You know it.

ಶ್ರೀ ಸಿ. ಎಚ್. ಲಿಂಗದೇವರು.—ಯಾವ ಆಧಾರದ ಮೇಲೆ ಇದನ್ನು select ಮಾಡುತ್ತೀರಿ ?

Dr. R. NAGAN GOWDA.—They have said that there is a certain basis for that.

ಶ್ರೀ ಟಿ. ಎಕ್. ಮೂಡಲಗಿರಿಗೌಡ.—ಈ ಕಮ್ಯೂನಿಟಿ ಪ್ರಾಜೆಕ್ಟಿಗೆ ಸ್ಥಳಗಳನ್ನು ಸೆಲೆಕ್ಟ್ ಮಾಡತಕ್ಕವರು ತಾವೇ, ಭಾರತ ಸರ್ಕಾರದವರೇ ?

ಡಾ॥ ಆರ್. ನಾಗನಗೌಡ.—ಈ ಸರ್ಕಾರದವರು.

ಶ್ರೀ ಟಿ. ಎಕ್. ಮೂಡಲಗಿರಿಗೌಡ.—ಶ್ರೀಮಾನ್ ಲಿಂಗದೇವರು ಕೇಳಿದ್ದಕ್ಕೆ ಉತ್ತರ ಹೇಳಲಿಲ್ಲ. ಯಾವ ಆಧಾರದ ಮೇಲೆ, ಯಾವ ನೀತಿಯ ಮೇಲೆ ಇವನ್ನು ತೆಗೆದುಕೊಳ್ಳುತ್ತೀರಿ ಎಂಬುದಕ್ಕೆ ಉತ್ತರ ಹೇಳುವುದೆ ಕ್ಯಾಗುತ್ತದೆಯೇ ?

ಡಾ॥ ಆರ್. ನಾಗನಗೌಡ.—ಆರಿಸಬೇಕಾಗಿರತಕ್ಕ ಸ್ಥಳಗಳು ಅನೇಕವಿವೆ. ಯಾವಯಾವ ಸ್ಥಳಗಳಲ್ಲಿ ಈಗಾಗಲೇ ಆರಿಸಿಲ್ಲವೋ ಅದನ್ನು ನೋಡಿಕೊಂಡು ಏರ್ಪಾಡು ಮಾಡಬೇಕಾಗಿದೆ. ಮಾನ್ಯ ಸದಸ್ಯರು ಏನು ಸಲಹೆ ಮಾಡುತ್ತೀರೋ ಅದನ್ನು ಯೋಚನೆ ಮಾಡಿ ಮಾಡುತ್ತೇವೆ.

ಶ್ರೀ ಟಿ. ಎಕ್. ಮೂಡಲಗಿರಿಗೌಡ.—ತಾವು ಸೆಲೆಕ್ಟ್ ಮಾಡತಕ್ಕ ಕೆಲವು ಪ್ರದೇಶಗಳಲ್ಲಿ ಈ ಸ್ಕೀಮು fail ಆಗುತ್ತಿದೆ ಎಂಬುದು ತಮ್ಮ ಗಮನಕ್ಕೆ ಬಂದಿದೆಯೇ !

ಡಾ॥ ಆರ್. ನಾಗನಗೌಡ.—ಇಲ್ಲ. ನ್ಯಾಷನಲ್ ಎಕ್ಸ್‌ಟೆಷ್ಷನ್ ಸರ್ವಿಸ್ ಪ್ರಾರಂಭ ಮಾಡಿದ್ದೇವೆಯಲ್ಲ ಇದನ್ನು ಕಳೆದ ಅಕ್ಟೋಬರ್‌ನಲ್ಲಿ ಮಾಡಿದ್ದೇವೆ. ಆ ಪ್ರದೇಶಗಳಿಗೆ trained workersನ್ನು ಕಳುಹಿಸಿಕೊಡಬೇಕೆಂದು ಏರ್ಪಾಡು ಮಾಡಿದ್ದೇವೆ. ಆ trained workers ಹೋದ ಮೇಲೆ ಕೆಲಸ ಹೇಗೆ ಆಗಿದೆ ಎಂಬುದನ್ನು ಹೇಳುವುದಕ್ಕೆ ಆಗುತ್ತದೆ.

ಶ್ರೀ ಟಿ. ಎಕ್. ಮೂಡಲಗಿರಿಗೌಡ.—ತಾವು ಇದನ್ನು ಎಕ್ಸ್‌ಟೆಂಡ್ ಮಾಡಲಾಗುತ್ತದೆ ಎಂದು ಅಪ್ಪಣೆ ಕೊಡಿಸಿದಿರಿ. ಇದಕ್ಕೆ ಪರ್ಮನೆಂಟ್ ಆಗಿರತಕ್ಕ ಒಂದು ಸ್ಟ್ರಾಫ್ ಅಥವಾ ಏರ್ಪಾಡನ್ನು ತಾವು ಮಾಡುವುದಕ್ಕೆ ಸಾಧ್ಯವಾಗುತ್ತದೆಯೇ ಮತ್ತು ಅದನ್ನು ಎಲ್ಲಾ ಕಡೆಗಳಿಗೂ ಅನ್ವಯಿಸತಕ್ಕ ರೀತಿಯಲ್ಲಿ ಮಾಡುವುದಕ್ಕಾಗುತ್ತದೆಯೇ ?

ಡಾ॥ ಆರ್. ನಾಗನಗೌಡ.—ಹೆಡ್ ಕ್ವಾರ್ಟರ್ಸ್‌ನಲ್ಲಿ ಒಬ್ಬ ಡೆವಲಪ್‌ಮೆಂಟ್ ಕಮೀಷನರ್ ಎಂದು ಹೇಳಿ ಏರ್ಪಾಡು ಮಾಡಿದ್ದೇವೆ ; ಡಿಸ್ಟ್ರಿಕ್ಟ್‌ನಲ್ಲಿ ನಬ್ ಡಿವಿಜ಼ನ್ ಆಫೀಸರು ಇರುತ್ತಾರೆಯಲ್ಲ ಅವರೇ ನೋಡಿಕೊಳ್ಳುತ್ತಾ ಇದ್ದಾರೆ. ಈ ಅರೇಂಜ್‌ಮೆಂಟು ಚೆನ್ನಾಗಿದೆ. ಪರ್ಮನೆಂಟ್ ಎಂದರೆ ಏನು ಎಂಬುದು ಗೊತ್ತಾಗಲಿಲ್ಲ.

ಶ್ರೀ ಟಿ. ಎಕ್. ಮೂಡಲಗಿರಿಗೌಡ.—ಈ ಸ್ಕೀಮು work out ಆಗುವುದಕ್ಕೆ ಅನುಗುಣವಾಗಿರತಕ್ಕ ಕೆಲಸಕಾರ್ಯ ಮಾಡತಕ್ಕ ಅಧಿಕಾರ ವರ್ಗವನ್ನು ಈ ಎಕ್ಸ್‌ಟೆಷ್ಷನ್ ಸ್ಕೀಮಿಗೆ ಹಾಕಲು ಅವಕಾಶವಾಗುತ್ತದೆಯೇ ?

ಡಾ॥ ಆರ್. ನಾಗನಗೌಡ.—ಕಮ್ಯೂನಿಟಿ ಪ್ರಾಜೆಕ್ಟು 1952 ರಲ್ಲಿ ಪ್ರಾರಂಭವಾಯಿತು. ನ್ಯಾಷನಲ್ ಎಕ್ಸ್‌ಟೆಷ್ಷನ್ ಸ್ಕೀಮು ಅಕ್ಟೋಬರ್ 1953 ರಿಂದ ಪ್ರಾರಂಭವಾಗಿದೆ. ಒಂದು ಪ್ರೋಗ್ರಾಂ ಪ್ರಕಾರ work out ಮಾಡಬೇಕು. ಆದಕಾರಣ ತಮ್ಮ suggestion ಏನಾದರೂ ಇದ್ದರೆ ಕೊಡಿ, consider ಮಾಡುತ್ತೇವೆ.

ಶ್ರೀ ಟಿ. ಎಕ್. ಮೂಡಲಗಿರಿಗೌಡ.—ಹಿಂದಿನಿಂದ ಈ ಡೆವಲಪ್‌ಮೆಂಟ್ ಸ್ಕೀಮಿನಲ್ಲಿ ಕೆಲಸ ಮಾಡತಕ್ಕ ಅಧಿಕಾರಿಗಳು ಯಾರುಯಾರು ಚೆನ್ನಾಗಿ ಕೆಲಸ ಮಾಡಿದ್ದಾರೆ ಎಂಬ ಲಿಸ್ಟ್ ಇದೆಯೇ ?

ಡಾ॥ ಆರ್. ನಾಗನಗೌಡ.—ಇರುತ್ತದೆ ಎಂದು ತಿಳಿದುಕೊಂಡಿದ್ದೇನೆ.

ಶ್ರೀ ಟಿ. ಎಕ್. ಮೂಡಲಗಿರಿಗೌಡ.—ಅಂತಹವರನ್ನು ಈ ಸ್ಕೀಮಿಗೆ ಹಾಕುವುದಕ್ಕೆ ಅಭ್ಯಂತರವೇನು ?

ಡಾ॥ ಆರ್. ನಾಗನಗೌಡ.—ವಿಚಾರಿಸುತ್ತೇನೆ.

ಶ್ರೀ ಟಿ. ಎಕ್. ಮೂಡಲಗಿರಿಗೌಡ.—ತುಮಕೂರು ತಾಲ್ಲೂಕಿನ ಒಂದು ಕಾರ್ಖರ್ಟಿಸ್‌ನಲ್ಲಿ ರೆವೆನ್ಯೂ ಮಿನಿಸ್ಟರವರು ಭಾಗವಹಿಸಿದ್ದರೇ ?

ಡಾ॥ ಆರ್. ನಾಗನಗೌಡ.—ಇರಬಹುದು.

ಶ್ರೀ ಟಿ. ಎಕ್. ಮೂಡಲಗಿರಿಗೌಡ.—ಅವರ ಅಧ್ಯಕ್ಷತೆಯಲ್ಲಿ ತುಮಕೂರು ತಾಲ್ಲೂಕು ಮತ್ತು ಕುಣಿಗಲ್ ತಾಲ್ಲೂಕಿನ ಕೆಲವು ಹೋಬಳಿಗಳನ್ನು ಕಮ್ಯೂನಿಟಿ ಪ್ರಾಜೆಕ್ಟ್‌ನಲ್ಲಿ ಸೇರಿಸಬೇಕೆಂದು ನಿರ್ಣಯಮಾಡಿ ಸರ್ಕಾರದವರಿಗೆ ಕಳುಹಿಸಿರಲಿಲ್ಲವೇ ?

ಡಾ॥ ಆರ್. ನಾಗನಗೌಡ.—ಕಮ್ಯೂನಿಟಿ ಪ್ರಾಜೆಕ್ಟು ಎಕ್ಸ್‌ಟೆಂಡ್ ಆಗುವುದಿಲ್ಲ. ನ್ಯಾಷನಲ್ ಎಕ್ಸ್‌ಟೆಷ್ಷನ್ ವಿಷಯವಾಗಿ ಮಾತನಾಡುತ್ತಾ ಇದ್ದೇವೆ. ನ್ಯಾಷನಲ್ ಎಕ್ಸ್‌ಟೆಷ್ಷನ್ ಸರ್ವಿಸ್ ಏರ್ಪಾಡು ಮಾಡಬೇಕೆಂದು ಅಭಿಪ್ರಾಯವಿದ್ದರೆ ಅದನ್ನು consider ಮಾಡುತ್ತೇವೆ.

ಶ್ರೀ ಟಿ. ಎಕ್. ಮೂಡಲಗಿರಿಗೌಡ.—ಅಕೌಂಟೆಂಟ್ ಜನರಲ್ ಶ್ರೀಮಾನ್ ನರಹರಿರಾಯರು ಊರಡುಗೆರೆ ಹೋಬಳಿ, ಗೂಳೂರು ಹೋಬಳಿ, ಹೆಬ್ಬೂರು ಹೋಬಳಿಗಳನ್ನು ನ್ಯಾಷನಲ್ ಎಕ್ಸ್‌ಟೆಷ್ಷನ್ ಸ್ಕೀಮಿನಲ್ಲಿ ತೆಗೆದು ಕೊಳ್ಳಬೇಕೆಂದು ಬರೆದಿದ್ದಾರೆಯೇ ?

ಡಾ॥ ಆರ್. ನಾಗನಗೌಡ.—ವಿಚಾರಿಸುತ್ತೇನೆ.

ಶ್ರೀ ಟಿ. ಎಕ್. ಮೂಡಲಗಿರಿಗೌಡ.—ತುಮಕೂರು ತಾಲ್ಲೂಕಿನ ಊರಡುಗೆರೆ, ಗೂಳೂರು, ಹೆಬ್ಬೂರು ಈ ಮೂರು ಹೋಬಳಿಗಳನ್ನೂ ನ್ಯಾಷನಲ್ ಎಕ್ಸ್‌ಟೆಷ್ಷನ್ ಸ್ಕೀಮಿನಲ್ಲಿ ಸೇರಿಸುತ್ತೀರಾ ?

ಡಾ॥ ಆರ್. ನಾಗನಗೌಡ.—ನಾಳೆ ಈ ಸೆಂಟರ್ಸ್‌ನ್ನು ಸೆಲೆಕ್ಟ್ ಮಾಡುವಾಗ ಅವನ್ನೂ ಗಮನದಲ್ಲಿಟ್ಟು ಕೊಂಡು ಪರಿಶೀಲನೆ ಮಾಡುತ್ತೇವೆ.

ಶ್ರೀ ಟಿ. ಹನುಮಯ್ಯ.—ಸ್ವಾಮಿ, ಈ ನ್ಯಾಷನಲ್ ಎಕ್ಸ್‌ಟೆಷ್ಷನ್ ಸ್ಕೀಮಿಗೆ ಸ್ಥಳಗಳನ್ನು ಪ್ರತಿಯೊಂದು ಡಿಸ್ಟ್ರಿಕ್ಟ್‌ನಲ್ಲೂ ಯಾವ ಆಧಾರದ ಮೇಲೆ ಸೆಲೆಕ್ಟ್ ಮಾಡುತ್ತೀರಿ ?

(ಉತ್ತರವಿಲ್ಲ.)

ಶ್ರೀ ಟಿ. ಹನುಮಯ್ಯ.—ಚಿತ್ರದುರ್ಗ ಡಿಸ್ಟ್ರಿಕ್ಟ್‌ನಲ್ಲಿ ಎಷ್ಟು ಸ್ಥಳಗಳಿಗೆ ರೆಕಮಂಡೇಷನ್ ಬಂದಿತ್ತು ಸ್ವಾಮಿ ?

ಡಾ॥ ಆರ್. ನಾಗನಗೌಡ.—ಅಲ್ಲೂ ಒಂದನ್ನು ಆರಿಸಿದ್ದೇವಲ್ಲ !

ಶ್ರೀ ಟಿ. ಹನುಮಯ್ಯ.—ಸ್ಥಳೀಯ ಅಧಿಕಾರಿಗಳು ಎಷ್ಟು ಸ್ಥಳಗಳಿಗೆ ಅನ್ವಯಿಸಬೇಕೆಂದು ಸರ್ಕಾರದವರಿಗೆ ರೆಕಮಂಡೇಷನ್ ಕಳುಹಿಸಿದ್ದರು ?

ಡಾ॥ ಆರ್. ನಾಗನಗೌಡ.—ಅದನ್ನೆಲ್ಲಾ ಯೋಚನೆಯಲ್ಲಿಟ್ಟುಕೊಂಡೇ ಅಲ್ಲಿಗೆ ಒಂದು ಏರ್ಪಾಡು ಮಾಡಿದ್ದೇವೆ.

ಶ್ರೀ ಟಿ. ಹನುಮಯ್ಯ.—ಈಗ ಹಿರಿಯೂರು ತಾಲ್ಲೂಕಿಗೆ first preference ಕೊಡಬೇಕೆಂಬುದು ಸರ್ಕಾರದ ಗಮನದಲ್ಲಿದೆಯೇ ?

ಡಾ॥ ಆರ್. ನಾಗನಗೌಡ.—ಇಲ್ಲ. ಈಗ ನಾವು ಸೆಲೆಕ್ಟ್ ಮಾಡಿರುವುದು ಬಹಳ ಚೆಲೋದು. ಎಲ್ಲರೂ ಸಹಾಯ ಮಾಡಿ successful ಆಗಿ ಮಾಡಿದರೆ ಚೆನ್ನಾಗಿರುತ್ತದೆ ಎಂದು ಗೊತ್ತಾಗಿದೆ.

ಶ್ರೀ ಕೊಟ್ರ ಬಸವನಗೌಡ—ನ್ಯಾಷನಲ್ ಎಕ್ಸ್ಟೆಷನ್ ಸ್ಕೀಂ ಬಳ್ಳಾರಿಗೂ ಅನ್ವಯಿಸುತ್ತೀರಾ?

ಡಾ॥ ಆರ್. ನಾಗನಗೌಡ.—ಇಲ್ಲ.

ಶ್ರೀ ಕೊಟ್ರ ಬಸವನಗೌಡ.—ಕೂಡ್ಲಿಗಿ ತಾಲ್ಲೂಕನ್ನೂ ಈ ಸ್ಕೀಮಿನಲ್ಲಿ ಸೇರಿಸುವುದಕ್ಕಾಗುತ್ತದೆಯೇ?

ಡಾ॥ ಆರ್. ನಾಗನಗೌಡ.—ಅದನ್ನು ಗಮನದಲ್ಲಿಟ್ಟುಕೊಂಡು ಅರಿಸುತ್ತೇವೆ.

Mr. SPEAKER.—That will do, so far as these questions are concerned. Questions Nos. 696 and 960 may be taken up together.

Minimum Wages paid to Labour employed in Government Industries and Plantations.

Q.—696. Sri B. MADHAVACHAR (Bhadravati).—

Will the Government be pleased to state :—

(*a*) the number of workers employed in State-owned Industries, Industries run on joint-stock basis, private industries, and plantations ;

(*b*) the minimum wages paid in State-owned industries and plantations ?

A.—Sri A. G. RAMACHANDRA RAO (Minister for Law and Education).—

	No.
(*a*) (i) State-owned Industries ...	9,824
(ii) Private including those on Joint-stock basis	70,718
(iii) Plantations	60,000 approximately.

(*b*) The minimum wages paid in the State-owned Industries are as follows :—

	Rs. a. p.		Rs. a. p.
Men ...	0 8 0	to	0 12 0
Women ...	0 6 0	to	0 12 0
Children of certified age ...	0 6 0		

The minimum wages paid to workers in the Plantations are fixed under the Minimum Wages Act, 1948 (Central Act XI of 1948) as shown below :

	Basic wages	*Dearness allowance*	*All inclusive wages*
	Rs. a. p.	Rs. a. p.	Rs. a. p.
Men ...	0 10 0	0 6 0	1 0 0
Women ...	0 9 0	0 4 0	0 13 0
Adolescents	0 7 0	0 3 0	0 10 0
Children ...	0 6 0	0 3 0	0 9 0

Q.—960. Sri D. VENKATESH (Gandhinagar):—

Will the Government be pleased to state :—

(*a*) how many registered factories are there in our State ;

(*b*) the names and the total number of workers employed in each of the concerned factories ?

A.—Sri A. G. RAMACHANDRA RAO (Minister for Law and Education).—

(*a*) 581 up to 15th February 1954.

(*b*) The total number of workers in all the 581 factories is 83,082.

The labour and time involved in indicating the total number of workers in each Factory and their names will not be commensurate with the result to be achieved.

Sri B. MADHAVACHAR.—May I know the names of the State-owned industries where the workers are being paid the minimum wage of 12 annas as provided in the Minimum Wages Act?

Sri A. G. RAMACHANDRA RAO.—I believe in all the State-owned industries, the minimum wage is being paid.

Sri B. MADHAVACHAR.—According to my information, it is ten annas. So I want to know the names of the State-owned industries where it is 12 annas.

Sri A. G. RAMACHANDRA RAO.—I have said my information is that in all State-owned industries, this minimum wage is being paid. If it is not being paid, if it is intimated, I will make enquiries.